ಸೃಜನಿ

SRUJANI: Indian Journal of Innovative Research and Development (SIJIRD)
Volume-5 Issue 5, November-December 2026, Pp. 1-5
Bi-Monthly, Peer-Reviewed, Open Access, Indexed Journal

I S S N: 2583-3510

SIRDF JOURNALS
editor@srujani.in
www.srujani.in

ಕನ್ನಡ ಜಾನಪದ ಸಾಹಿತ್ಯ : ಕೃತಕ ಬುದ್ಧಿಮತ್ತೆ

ಡಾ. ಉಮೇಶ್ ಎಂ.ಆರ್
ಕನ್ನಡ ಸಹಾಯಕ ಪ್ರಾಧ್ಯಾಪಕರು, ದಯಾನಂದ ಸಾಗರ್ ಕಲೆ, ವಿಜ್ಞಾನ ಮತ್ತು ವಾಣಿಜ್ಯ ಕಾಲೇಜು, ಕುಮಾರಸ್ವಾಮಿ ಬಡಾವಣೆ, ಬೆಂಗಳೂರು

Abstract:
ಒಂದು ಜನಸಮುದಾಯದಲ್ಲಿನ ಜೀವನ ಪದ್ಧತಿ, ಆಚರಣೆ, ನಂಬಿಕೆ, ಸಂಪ್ರದಾಯಗಳೂ ಸೇರಿದಂತೆ ಅಲ್ಲಿನ ಆಟ, ಪಾಠ, ಕರಕುಶಲ ಕಲೆ ವಸ್ತುಗಳೆಲ್ಲವನ್ನು ಜಾನಪದ ವೆಂದು ಕರೆಯಲಾಗಿದೆ. ಆದಿ ಮಾನವನ ಕಾಲದಿಂದ ಹಿಡಿದು ಆಧುನಿಕ ಕಾಲದ ನಾಗರಿಕ ಮಾನವ ಸಮುದಾಯಗಳಲ್ಲಿ ಜಾನಪದ ಅಳಿಯದೇ ಉಳಿದುಕೊಂಡು ಬಂದಿದೆ. ಭಾಷೆಗೆ ಲಿಪಿ ಕಾಣಿಸಿಕೊಳ್ಳದ ಪೂರ್ವ ಕಾಲದಲ್ಲಿ ಮಾನವ ಸಮಾಜದ ಎಲ್ಲಾ ವರ್ತನೆಗಳು ಮೌಖಿಕವಾಗಿಯೇ ಅಭಿವ್ಯಕ್ತವಾಗುತ್ತಿದ್ದವು. ಹಾಡು, ಕುಣಿತ, ಆಚಾರ–ವಿಚಾರಗಳೆಲ್ಲವು ಆಯಾ ಸಮುದಾಯಗಳಲ್ಲಿ ತಲೆಮಾರಿನಿಂದ ತಲೆಮಾರಿಗೆ ಮೌಖಿಕವಾಗಿಯೇ ಸಾಗಿ ಬರುತ್ತಿದ್ದವು. ಮಾನವನು ಭಾಷೆಗೆ ಲಿಪಿಯನ್ನು ಕಂಡುಕೊಂಡ ಮೇಲೆ ಸಮಾಜದಲ್ಲಿ ಅಲಾವರು ಬದಲಾವಣೆಗಳು ಕಾಣಿಸಿಕೊಂಡವು.

Keywords: *ಕನ್ನಡ ಭಾಷೆ, ಜಾನಪದ ಸಾಹಿತ್ಯ, ಸಂಸ್ಕೃತಿ, ಡಿಜಿಟಲ್‌ಯುಗ*

ಪೀಠಿಕೆ

ಯಾವುದೇ ಒಂದು ಜನಸಮುದಾಯದಲ್ಲಿನ ಜೀವನ ಪದ್ಧತಿ, ಆಚರಣೆ, ನಂಬಿಕೆ, ಸಂಪ್ರದಾಯಗಳೂ ಸೇರಿದಂತೆ ಅಲ್ಲಿನ ಆಟ, ಪಾಠ, ಕರಕುಶಲ ಕಲೆ ವಸ್ತುಗಳೆಲ್ಲವನ್ನು ಜಾನಪದವೆಂದು ಕರೆಯಲಾಗಿದೆ. ಆದಿ ಮಾನವನ ಕಾಲದಿಂದ ಹಿಡಿದು ಆಧುನಿಕ ಕಾಲದ ನಾಗರಿಕ ಮಾನವ ಸಮುದಾಯಗಳಲ್ಲಿ ಜಾನಪದ ಅಳಿಯದೇ ಉಳಿದುಕೊಂಡು ಬಂದಿದೆ. ಭಾಷೆಗೆ ಲಿಪಿ ಕಾಣಿಸಿಕೊಳ್ಳದ ಪೂರ್ವ ಕಾಲದಲ್ಲಿ ಮಾನವ ಸಮಾಜದ ಎಲ್ಲಾ ವರ್ತನೆಗಳು ಮೌಖಿಕವಾಗಿಯೇ ಅಭಿವ್ಯಕ್ತವಾಗುತ್ತಿದ್ದವು. ಹಾಡು ಕುಣಿತ, ಆಚಾರ–ವಿಚಾರಗಳೆಲ್ಲವು ಆಯಾ ಸಮುದಾಯಗಳಲ್ಲಿ ತಲೆಮಾರಿನಿಂದ ತಲೆಮಾರಿಗೆ ಮೌಖಿಕವಾಗಿಯೇ ಸಾಗಿ ಬರುತ್ತಿದ್ದವು. ಮಾನವನು ಭಾಷೆಗೆ ಲಿಪಿಯನ್ನು ಕಂಡುಕೊಂಡ ಮೇಲೆ ಸಮಾಜದಲ್ಲಿ ಹಲವಾರು ಬದಲಾವಣೆಗಳು ಕಾಣಿಸಿಕೊಂಡವು. ಅಂತಹ ಬದಲಾವಣೆಗಳಲ್ಲಿ ಮುಖ್ಯವಾದುದು ಅಕ್ಷರಸ್ಥರು ಮತ್ತು ಅನಕ್ಷರಸ್ಥರು ಎಂಬ ಎರಡು ವರ್ಗಗಳು ಸಮಾಜದಲ್ಲಿ ಅಸ್ಥಿತ್ವಕ್ಕೆ ಬಂದವು. ಪರಂಪರೆಯಿಂದ ಬಂದುದು ಅಕ್ಷರವಂತರಲ್ಲಿ ಪರಿಷ್ಕಾರಗೊಂಡು ಹೊಸ ರೂಪ ಪಡೆದಂತೆಲ್ಲ ಶಿಷ್ಟಪದವಾಯಿತು. ಒಂದೇ ಸಮುದಾಯದಲ್ಲಿಯೇ ಅನಕ್ಷರಸ್ಥರ ಬದುಕು ಜಾನಪದವೆಂತಲೂ, ಅಕ್ಷರಸ್ಥರ ಶಿಷ್ಟಪದವೆಂತಲೂ ಗುರಿತಿಸಲ್ಪಟ್ಟಿತು. ಅಂದ ಮಾತ್ರಕ್ಕೆ ಲಿಖಿತವಾಗಿರುವುದೆಲ್ಲ ಶಿಷ್ಟ, ಅಲಿಖಿತವಾಗಿರುವುದೆಲ್ಲ ಜಾನಪದವೆಂದು ಹೇಳಲು ಬರುವಂತಿಲ್ಲ.

Please cite this article as: ಉಮೇಶ್, ಎಂ. ಆರ್. (2026). ಕನ್ನಡ ಜಾನಪದ ಸಾಹಿತ್ಯ : ಕೃತಕ ಬುದ್ಧಿಮತ್ತೆ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್*, 5(5), 1–5

ಲಿಖಿತವಾಗಿರುವುದರಲ್ಲಿ ಮೌಖಿಕ ಪರಂಪರೆಯನ್ನನುಸರಿಸಿ ದಾಖಲಾದ ಎಷ್ಟೋ ವಿಷಯಗಳಿರಬಹುದು, ಮೌಖಿತವಾಗಿರುವುದರಲ್ಲಿ ಶಿಷ್ಟತೆಯ ಅಂಶಗಳು ಬೆರೆತಿರಬಹುದು. ಆದರೆ ಅವೆರಡೂ ಒಂದಕ್ಕೊಂದು ಪೂರಕ ಸಂಬಂಧ ಹೊಂದಿದ ಅಭಿವ್ಯಕ್ತಿ ಮಾರ್ಗಗಳೆನ್ನಬಹುದು. ಅದೇನೇ ಇದ್ದರೂ 'ಜನಪದ'ಕ್ಕೆ ಹೆಚ್ಚಿನ ಮಹತ್ವವಿರುವುದಂತೂ ನಿಜ.

ಈ ಹಿನ್ನೆಲೆಯಲ್ಲಿ ಜಾನಪದ ತುಂಬಾ ಪ್ರಾಚೀನವೂ, ಆಧುನಿಕ ಜೀವನಕ್ಕೆ ಪ್ರೇರಕವೂ ಆಗಿದೆ. ಇಂದು ಅರ್ವಾಚೀನವಾಗಿ–ಗೋಚರಿಸುವುದಿಲ್ಲ, ಹಿಂದಿನ ಜಾನಪದದಿಂದ ಪ್ರೇರಣೆಗೊಂಡು, ರೂಪುತಾಳಿದೆ. ಕಲೆ ಸಾಹಿತ್ಯ, ಸಂಸ್ಕೃತಿಗಳಿಗೂ ಈ ಮಾತು ಅನ್ವಯವಾಗುತ್ತದೆ.

ಒಟ್ಟಾರೆ ಒಬ್ಬರ ಬಾಯಿಯಿಂದ ಮತ್ತೊಬ್ಬರ ಬಾಯಿಗೆ ಮೌಖಿಕ ರೂಪದಲ್ಲಿ ತಲೆಮಾರಿನಿಂದ ತಲೆಮಾರಿಗೆ ಸಾಗಿ ಬರುವ ಸಾಹಿತ್ಯವನ್ನು ಜಾನಪದ ಸಾಹಿತ್ಯ ಎಂದು ಕರೆಯಬಹುದು. ಇಂತಹ ಮೌಖಿಕ ಸಾಹಿತ್ಯದಲ್ಲಿ ಕರ್ನಾಟಕ ಜಾನಪದ ಸಾಹಿತ್ಯವು ಅತ್ಯಂತ ಸಮೃದ್ಧವಾಗಿದೆ. ಇಂಗ್ಲಿಷಿನ Folklore ಎಂಬ ಪದಕ್ಕೆ ಸಮಾನಾರ್ಥಕವಾಗಿ ಕನ್ನಡದಲ್ಲಿ ಜಾನಪದ ಎನ್ನುವ ಪದವನ್ನು ಬಳಸುತ್ತಿದ್ದೇವೆ. Folklore ಎನ್ನುವ ಇಂಗ್ಲಿಷ್ ಪದವು Folk & Lore ಎಂಬ ಎರಡು ಪದಗಳಿಂದ ಕೂಡಿದೆ. Folk ಎಂಬ ಪದಕ್ಕೆ ಕನ್ನಡದಲ್ಲಿ ಜನಪದ ಎಂತಲೂ, Lore ಎಂಬ ಪದಕ್ಕೆ ಜ್ಞಾನ ಎಂಬ ಅರ್ಥವಿದೆ. Folklore ಗೆ ಸಮಾನಾರ್ಥಕವಾಗಿ ಕನ್ನಡದಲ್ಲಿ ಜಾನಪದ ಜ್ಞಾನ ಎಂದು ಬಳಸುತ್ತಿದ್ದೇವೆ. ಜನಪದ ಜ್ಞಾನವೇ ಜಾನಪದ ಎಂದು ಕರೆಯಬಹುದು. ಜನಪದರ ಸಾಹಿತ್ಯ, ಸಂಗೀತ, ನೃತ್ಯ, ಆಟ ಈ ಎಲ್ಲವನ್ನು ಒಳಗೊಂಡಿದ್ದೇ ಜಾನಪದವೆಂದು ಹೇಳಬಹುದು.

ಜಾನಪದ ಎಂದರೇನು? ಎಂಬುದರ ಕುರಿತು ಭಾರತೀಯ ಪಾಶ್ಚಾತ್ಯ ವಿದ್ವಾಂಸರು ವ್ಯಾಖ್ಯಾನವನ್ನು ನೀಡಲು ಪ್ರಯತ್ನಿಸಿದ್ದಾರೆ. ಅವುಗಳನ್ನು ಈ ಕೆಳಗಿನಂತೆ ನೋಡಬಹುದು.

ಇ ಡಬ್ಲ್ಯೂ ವೊಗೆಲಿನ್: ಮೌಖಿಕ ಸಂಪ್ರದಾಯದಲ್ಲಿ ಸಾಗಿಬಂದ ಯಾವುದೇ ಪರಂಪರಾನುಗತ ವಿಷಯವಾಗಿರುವ ಪದ್ಯ ಮತ್ತು ಗದ್ಯ ವಿಷಯವಾಗಿರಲಿ ಅದುವೇ ಜಾನಪದ ಎನ್ನುತ್ತೇವೆ.

ಬಾರ್ಬೆ ಮೇರಿಯಸ್: ಯಾವಾಗ ಹಿಂದಿನದಾದ ಜ್ಞಾನ ಅನುಭವ ಜಾಣ್ಮೆ ನೈಪುಣ್ಯ ಹವ್ಯಾಸಗಳು ಮತ್ತು ಅನುಸರಣೆಗಳು ಹಳೆಯ ತಲೆಮಾರಿನಿಂದ ಹೊಸ ತಲೆಮಾರಿಗೆ ಮಾತಿನ ಮೂಲಕ ಹಸ್ತಾಂತರಗೊಳಿಸುತ್ತವೆಯೋ ಇವು ಪುಸ್ತಕ ಅಚ್ಚು ವಿಷಯಗಳು ಆಗಿರುವುದಿಲ್ಲವೋ ಅಲ್ಲಿ ನಾವು ಜಾನಪದವನ್ನು ಕಾಣುತ್ತೇವೆ.

ಹಾ.ಮಾ.ನಾಯಕ: ಜಾನಪದ ಲಿಖಿತ ದಾಖಲೆಗಿಂತ ಜನತೆಯ ಗ್ರಂಥಸ್ಥವಲ್ಲದ ಸಾಂಪ್ರದಾಯಿಕ ಮೊತ್ತ. ಸಂಪ್ರದಾಯವನ್ನು ಕುರಿತಾದ ವಿಜ್ಞಾನ ಯಾವುದೇ ಸಮಾಜದ ವಾಚಿಕ ಪರಂಪರೆಗಳ ಕಲೆ ಮತ್ತು ನಂಬಿಕೆಗಳ ಮೊತ್ತ.

ಜೀ.ಶಂ.ಪರಮಶಿವಯ್ಯ: ನಾಗರಿಕತೆಗೂ ಮೂಲವಾದ ಶಿಷ್ಠ ಸಂಸ್ಕೃತಿಯಿಂದ ದೂರವಾದ ಪರಂಪರಾನುಗತವಾದ ಬೆಳವಣಿಗೆಗಳು ಪಡೆದ ಜನಸಮುದಾಯದ ವಿಶಿಷ್ಟ ಸಂಸ್ಕೃತಿಯೇ ಜಾನಪದ.

ಇಂತಹ ಮಹತ್ವಪೂರ್ಣ ವಿಷಯದ ಬಗೆಗೆ ಚಿಂತನ – ಮಂಥನಗಳು ನಡೆದದ್ದು ಮಾತ್ರ ತೀರಾ ಇತ್ತೀಚೆಗೆ. ಆದು ಪಾಶ್ಚಾತ್ಯರಲ್ಲಿ ಏನಿಲ್ಲವೆಂದರೂ ಮೂರು ನಾಲ್ಕು ಶತಮಾನಗಳಷ್ಟು ಹಿಂದಿನಿಂದಲೇ ನಡೆದುಕೊಂಡು ಬಂದಿದೆ. ಅದರಲ್ಲೂ ಕರ್ನಾಟಕ ಜಾನಪದ ಪಾಶ್ಚಾತ್ಯರ ಪಾದರ್ಪಣೆಯಾದ ಮೇಲೆ ಎಂದೇ ಹೇಳಬಹುದು. ಅವರಿಗೆ ಜಾನಪದದ ಬಗ್ಗೆ ನೇರವಾದ ಆಸಕ್ತಿ ಇರಲಿಲ್ಲ, ಆದರೆ ಆಡಳಿತ

ನಡೆಸಲು ಸ್ಥಳೀಯ ಭಾಷೆ ಮತ್ತು ಸಂಸ್ಕೃತಿಯನ್ನು ಕಲಿಯಬೇಕಾಯಿತು. ಹಾಗಾಗಿ ಭಾಷೆಯನ್ನು ಕಲಿಯಲು ಜನರ ಮಧ್ಯಕ್ಕೆ ಹೊಗಬೇಕಾಯಿತು. ಹೊಲ, ಗದ್ದೆ, ಮನೆ ಮೊದಲಾದ ಕಡೆಗಳಲ್ಲಿ ಹೋದ ಕಡೆಯಲೆಲ್ಲ ಜಾನಪದವನ್ನು ಕಂಡು ಮೂಖವಿಸ್ಮಿತರಾಗುತ್ತಾರೆ. ಯಾವುದೇ ತರಬೇತಿಯಿಲ್ಲದೆ ಎಷ್ಟು ಸಲೀಸಾಗಿ ಹಾಡುತ್ತಾರೆ, ಎಂತಹ ಅದ್ಭುತವಾದ ಕಲೆಯನ್ನು ಕನ್ನಡಿಗರು ಹೊಂದಿದ್ದಾರೆ ಎಂದು ಆಶ್ಚರ್ಯ ಚಕಿತರಾಗುತ್ತಾರೆ. ನಂತರ ಜಾನಪದ ಸಂಗ್ರಹ ಮತ್ತು ಅಧ್ಯಯನದಲ್ಲಿ ತೊಡಗುತ್ತಾರೆ. ಹೀಗೆ ಜಾನಪದ ಕ್ಷೇತ್ರದಲ್ಲಿ ತೊಡಗಿಸಿಕೊಂಡವರಲ್ಲಿ ಎಡ್ಗರ್ ಥರ್ಸ್ಟನ್, ಅಬೆ ಡುಬೋಯಿಸ್, ಮೆಕೆಂಜಿ, ಗೋವರ್, ಫ್ಲೀಟ್, ಕಿಟೆಲ್ ಮೊದಲಾದವರು ಪ್ರಮುಖರಾಗಿದ್ದಾರೆ. ನಂತರ ಪಾಶ್ಚಾತ್ಯರು ಹಾಕಿಕೊಟ್ಟ ಮಾರ್ಗದಲ್ಲಿ ನಮ್ಮ ದೇಶಿ ವಿದ್ವಾಂಸರು ಹೆಜ್ಜೆಯಾಕುತ್ತಾರೆ. ಹಾಗಾಗಿ ಜಾನಪದ ಕ್ಷೇತ್ರದಲ್ಲಿ ಸಾವಿರಾರು ಕೃತಿಗಳು ಬರಲು ಸಾಧ್ಯವಾಯಿತು. ಆದಿ ಮಾನವನ ಕಾಲದಿಂದ ಹಿಡಿದು ಆಧುನಿಕ ಕಾಲದ ನಾಗರಿಕ ಮಾನವ ಸಮುದಾಯಗಳಲ್ಲಿ ಅಳಿಯದೇ ಉಳಿದುಕೊಂಡು ಬಂದಿರುವ ಜಾನಪದವು ಇತ್ತೀಚಿನ ದಿನಮಾನಗಳಲ್ಲಿ ಕೃತಕ ಬುದ್ಧಿಮತ್ತೆಯ ಮೂಲಕ ಅನೇಕ ಸಮಸ್ಯೆಗಳನ್ನು ಎದುರಿಸುತ್ತಿದೆ. ಇದರ ಪ್ರಭಾವದಿಂದಾಗಿ ಅಲ್ಪ ಸ್ವಲ್ಪ ಉಳಿದುಕೊಂಡು ಬರುತ್ತಿರುವ ಜಾನಪದ ಸಾಹಿತ್ಯವು ಕಣ್ಮರೆಯಾಗುತ್ತಿದೆ.

ಕೃತಕ ಬುದ್ಧಿಮತ್ತೆ ತಂತ್ರಜ್ಞಾನವು ಕನ್ನಡ ಜಾನಪದ ಕ್ಷೇತ್ರಕ್ಕೆ ಆಧುನಿಕತೆಯ ಸ್ಪರ್ಶ ನೀಡುತ್ತಿದ್ದರೂ, ಅದರ ಮೂಲ ಸತ್ವ ಮತ್ತು ಸಾಂಪ್ರದಾಯಿಕತೆಗೆ ಹಲವು ಗಂಭೀರ ಅನಾನುಕೂಲ ಹಾಗೂ ಸವಾಲುಗಳನ್ನು ತಂದೊಡ್ಡಿದೆ. ಜಾನಪದವು ಕೇವಲ ಕಲೆಯಲ್ಲ, ಅದು ತಲೆಮಾರುಗಳಿಂದ ಹರಿದುಬಂದ ಜೀವಂತ ಸಂಸ್ಕೃತಿಯಾಗಿದೆ.

ಕನ್ನಡ ಜಾನಪದದ ಮೇಲೆ ಕೃತಕ ಬುದ್ಧಿಮತ್ತೆ ಬೀರುತ್ತಿರುವ ಪ್ರಮುಖ ನಕಾರಾತ್ಮಕ ಪ್ರಭಾವಗಳು ಈ ಕೆಳಗಿನಂತಿವೆ:

ಸಂವೇದನೆಯ ಕೊರತೆ: ಜಾನಪದ ಸಾಹಿತ್ಯದಲ್ಲಿ ವಸ್ತುವಿನ (ವಿಷಯ) ಜೊತೆಗೆ ಭಾವನೆಗಳು ಮುಖ್ಯವಾಗುತ್ತವೆ. ಒಂದು ಕಥೆಯನ್ನು ನಿರೂಪಣೆ ಮಾಡುವ ಸಂದರ್ಭದಲ್ಲಿ ಕಥೆಗೆ ಜೀವ ತುಂಬುವ ಕಾರ್ಯವನ್ನು ನಿರೂಪಕನು ಮಾಡುತ್ತಾನೆ. ಇಂತಹ ಭಾವನೆಗಳನ್ನು ಕೃತಕ ಬುದ್ಧಿಮತ್ತೆ ತಂತ್ರಜ್ಞಾನದಲ್ಲಿ ಕಾಣಲಾಗುವುದಿಲ್ಲ. ಏಕೆಂದರೆ ಕೃತಕ ಬುದ್ಧಿಮತ್ತೆ ಯಾಂತ್ರಿಕವಾಗಿರುವುದರಿಂದ ಭಾವನೆಗಳನ್ನು ನಿರೀಕ್ಷಿಸುವಂತಿಲ್ಲ. ಮನುಷ್ಯರಂತೆ ನೋವು, ನಲಿವು ಅಥವಾ ಭಕ್ತಿ ಯಾವುದು ಕಾಣಲಾಗುವುದಿಲ್ಲ. ಕರಕುಶಲ ಕಲೆ ಅಥವಾ ಜಾನಪದ ಕಥೆ, ಗೀತೆಗಳಲ್ಲಿರುವ ಮಾನವೀಯ ಸ್ಪರ್ಶ ಮತ್ತು ಭಾವನಾತ್ಮಕ ಆಳವನ್ನು ಕೃತಕ ಬುದ್ಧಿಮತ್ತೆ ನೀಡಲಾರದು.

ಗ್ರಾಮೀಣ ಸೊಗಡು ಕಣ್ಮರೆ: ಜಾನಪದ ಕಲೆ ಮತ್ತು ಹಾಡುಗಳಲ್ಲಿ ಗ್ರಾಮೀಣ ಸೊಗಡು ಹೇರಳವಾಗಿ ಕಂಡುಬರುತ್ತದೆ. ಜೊತೆಗೆ ಕಥೆಯಾಗಿರಲಿ, ಹಾಡಾಗಿರಲಿ ಜಿವಂತಿಕೆಯ ಮೂಲಕ ನೈಜತೆಯನ್ನು ಪಡೆದುಕೊಂಡು ಸಾಗುತ್ತದೆ. ಆದರೆ ಕೃತಕ ಬುದ್ಧಿಮತ್ತೆ ಪ್ರಭಾವದಿಂದಾಗಿ ಕೃತಕ ಮತ್ತು ಯಾಂತ್ರಿಕವಾಗಿ ಬದಲಾಗುತ್ತಿವೆ. ಹಾಗಾಗಿ ಜಾನಪದ ಕಲೆ ಮತ್ತು ಹಾಡುಗಳಲ್ಲಿ ನೈಜತೆಯಾಗಲಿ ಮತ್ತು ಗ್ರಾಮೀಣ ಸೊಗಡಗಾಲಿ ಕಣ್ಮರೆಯಾಗುತ್ತಿದೆ.

ಸೀಮಿತ ದತ್ತಾಂಶ: ಕೃತಕ ಬುದ್ಧಿಮತ್ತೆ ಎನ್ನುವುದು ಯಂತ್ರವಾಗಿರುವುದರಿಂದ ತಾನು ಕೊಡುವ ಮಾಹಿತಿ ನೂರಕ್ಕೆ ನೂರರಷ್ಟು ನಿಖರವಾಗಿರುತ್ತದೆ ಎಂದು ಹೇಳಲಾಗುವುದಿಲ್ಲ. ಮನುಷ್ಯನು ಕೇಳಿದ ಎಲ್ಲಾ ಮಾಹಿತಿಗೆ ತನ್ನ ಬಳಿ ಲಬ್ಯವಿರುವ ಸೀಮಿತ ದತ್ತಾಂಶದ ಹಿನ್ನೆಲೆಯಲ್ಲಿ ಮಾಹಿತಿಯನ್ನು ನೀಡುತ್ತದೆ. ಕನ್ನಡದ ವಿಶಿಷ್ಟ ಜಾನಪದ ಪ್ರಕಾರಗಳಾದ ಯಕ್ಷಗಾನ, ದೊಡ್ಡಾಟ, ಅಥವಾ

ಗೀಗೀ ಪದಗಳ ನಿಖರ ಇತಿಹಾಸ ತಿಳಿಯದೆ ಕೃತಕ ಬುದ್ಧಿಮತ್ತೆ ತಪ್ಪು ವಿನ್ಯಾಸ ಅಥವಾ ಸಾಹಿತ್ಯವನ್ನು ಸೃಷ್ಟಿಸುವ ಅಪಾಯವಿದೆ.

ಸಾಂಪ್ರದಾಯಿಕ ಶೈಲಿಯ ನಾಶ: ಜಾನಪದ ಎನ್ನುವುದು ಮೌಖಿಕ ಪರಂಪರೆಯಾಗಿದೆ. ಗೀತೆಗಳು ಲಿಖಿತ ರೂಪಕ್ಕಿಂತ ಹೆಚ್ಚಾಗಿ ಮೌಖಿಕ ಪರಂಪರೆಯಿಂದ ಬಂದವು. ಹಾಗೂ ಹಾಡುವಂತಹ ಪ್ರಾದೇಶಿಕ ಬಿನ್ನತೆಯನ್ನು ಕಾಣಬಹುದು, ಆದರೆ ಕೃತಕ ಬುದ್ಧಿಮತ್ತೆ ತನ್ನದೇ ಆದ ನಿರ್ದಿಷ್ಟ ಶೈಲಿಯನ್ನು ಬಳಸುವುದರಿಂದ, ಪ್ರಾದೇಶಿಕ ಉಪಭಾಷೆಗಳು ಮತ್ತು ಜನಪದರ ವಿಶಿಷ್ಟ ಉಚ್ಚಾರಣಾ ಶೈಲಿಗಳು ನಾಶವಾಗಬಹುದು. ಹಾಡುಗಳನ್ನು ಪ್ರಾದೇಶಿಕ ಹಿನ್ನೆಲೆಯಲ್ಲಿ ಹಾಡಿದರೆ ಮಾತ್ರ ಹಾಡಿಗೆ ಜೀವ ಬರುತ್ತದೆ, ಇಲ್ಲವೆಂದರೆ ಹಾಡಿನ ಸೊಗಸು ಆಳಾಗಿ ತನ್ನ ಸತ್ವವನ್ನೆ ಕಳೆದುಕೊಳ್ಳುತ್ತದೆ

ವೃತ್ತಿ ಕಲಾವಿದರು ಕಣ್ಮರೆಯಾಗುತ್ತಾರೆ: ಹಬ್ಬ ಹರಿದಿನ, ಜಾತ್ರೆ, ಉತ್ಸವ ಮೊದಲಾದ ಸಂದರ್ಭಗಳಲ್ಲಿ ವಿವಿಧ ಕಲಾವಿದರನ್ನು ಕರೆಸಿ ಅವರುಗಳ ಮೂಲಕ ಹಾಡುವುದು, ಕುಣಿಯುವುದು ಮತ್ತು ವಿವಿಧ ರೀತಿಯ ಅಭಿನಯ ಮಾಡುವುದನ್ನು ಕಾಣುತಿದ್ದೆವು. ಇದರಿಂದ ಆ ಕಲಾವಿದರ ಜೀವನ ಸಾಗುತಿತ್ತು. ಆದರೆ ಕೃತಕ ಬುದ್ಧಿಮತ್ತೆಯಿಂದ ಹಬ್ಬ ಹರಿದಿನಗಳಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಡಿಜಿಟಲ್ ಆಡಿಯೋ ಮತ್ತು ಸಂಗೀತವನ್ನು ಬಳಸುತ್ತಿರುವುದರಿಂದ ನೈಜ ಜನಪದ ಕಲಾವಿದರಿಗೆ ಬೇಡಿಕೆ ಕಡಿಮೆಯಾಗುತ್ತಿದೆ. ಇದೇ ರೀತಿ ಕೃತಕ ಬುದ್ಧಿಮತ್ತೆಯ ತಂತ್ರಜ್ಞಾನ ಮುಂದುವರೆದರೆ ಅಂತಹ ವೃತ್ತಿ ಕಲಾವಿದರು ಕಣ್ಮರೆಯಾಗುತ್ತಾರೆ.

ಜಾನಪದ ಕಲೆಯ ವಿನಾಶ: ಜಾನಪದ ಕರಕುಶಲ ಕಲೆಗಳು ಮತ್ತು ಜಾನಪದ ಗೊಂಬೆಗಳ ತಯಾರಿಕೆಯನ್ನು ಮಾಡಿ ಅನೇಕ ಮಂದಿ ತಮ್ಮ ಜೀವನ ಸಾಗಿಸುತ್ತಿದ್ದರು. ಜೊತೆಗೆ ದೇಶದ ಆರ್ಥಿಕತೆಗೂ ಸಹಕಾರಿಯಾಗಿತ್ತು. ಆದರೆ ಕೃತಕ ಬುದ್ಧಿಮತ್ತೆ ತಂತ್ರಜ್ಞಾನದಿಂದ ಆಧುನಿಕ ಯಂತ್ರಗಳು ನಕಲು ಮಾಡುವುದರಿಂದ, ಸಾಂಪ್ರದಾಯಿಕ ಕರಕುಶಲ ಕಲೆಗಳನ್ನು ನಂಬಿ ವೃತ್ತಿ ಮಾಡುವವರು ನಿರುದ್ಯೋಗಿಗಳಾಗಿದ್ದಾರೆ. ಕೃತಕ ಬುದ್ಧಿಮತ್ತೆ ತಂತ್ರಜ್ಞಾನದಿಂದ ಒಂದು ಕಡೆ ಕರಕುಶಲ ಕಲೆ ನಾಶವಾದರೆ ಮತ್ತೊಂದೆಡೆ ಆರ್ಥಿಕತೆಯೂ ಕುಂಟಿತವಾಗಿದೆ.

ಮೂಲದ ಗುರುತು ನಾಶ: ಮಾನವ ತಾನಾಡುವ ಭಾಷೆಗೆ ಲಿಪಿ ಕಂಡುಕೊಳ್ಳುವುದಕ್ಕೂ ಮೊದಲಿನಿಂದ ಜಾನಪದ ಸಾಹಿತ್ಯ ಮತ್ತು ಕಲೆಗಳು ಪರಂಪರೆಯಿಂದ ಸಾಗಿಬರುತ್ತಿವೆ. ಇಂತಹ ಗ್ರಾಮೀಣ ಭಾಗದ ಜನಪದರು ಕಟ್ಟಿದ ಕಥೆಗಳು ಅಥವಾ ಹಾಡುಗಳನ್ನು ಕೃತಕ ಬುದ್ಧಿಮತ್ತೆ ತಂತ್ರಜ್ಞಾನದಿಂದ ತನ್ನದೆಂಬಂತೆ ಮರುಸೃಷ್ಟಿಸಿದಾಗ, ಅದರ ನಿಜವಾದ ಸೃಷ್ಟಿಕರ್ತರು ಯಾರೆಂಬುದೇ ಮರೆತುಹೋಗುತ್ತದೆ. ಮೂಲ ಸಮುದಾಯಗಳಿಗೆ ಸಿಗಬೇಕಾದ ಮನ್ನಣೆ ಸಿಗುತ್ತಿಲ್ಲ. ಮೂಲ ಸಮುದಾಯಗಳ ಸ್ಥಾನದಲ್ಲಿ. ಕೃತಕ ಬುದ್ಧಿಮತ್ತೆ ಸ್ಥಾನ ಪಡೆಯುತಿದೆ.

ಕೃತಕ ಬುದ್ಧಿಮತ್ತೆಯಿಂದಾಗಿ ಅನೇಕ ಸಮಸ್ಯೆ ಮತ್ತು ಸವಾಲುಗಳನ್ನು ಜಾನಪದ ಕ್ಷೇತ್ರವು ಎದುರಿಸಬೇಕಾಗುತ್ತದೆ. ತನ್ನಲ್ಲಿರುವ ದತ್ತಾಂಶದ ಹಿನ್ನೆಲೆಯಲ್ಲಿ ಮಾಹಿತಿ ಒದಗಿಸುವುದರಿಂದ ಕೃತಕ ಬುದ್ಧಿಮತ್ತೆ ಕೊಡುವ ಮಾಹಿತಿ ನಿಖರತೆಯನ್ನು ಪಡೆದಿರುವುದಿಲ್ಲ. ಅದೇ ರೀತಿ ಸಾಂಪ್ರದಾಯಿಕ ಕರಕುಶಲ ಕಲೆಗಳನ್ನು ನಂಬಿ ವೃತ್ತಿ ಮಾಡುವವರು ಹಾಗೂ ಕಲಾವಿದರು ಕಣ್ಮರೆಯಾಗುತ್ತಿದ್ದಾರೆ. ಕನ್ನಡ ಜಾನಪದವನ್ನು ಉಳಿಸಲು ಮೂಲ ಸಮುದಾಯಗಳಿಗೆ ಸಿಗಬೇಕಾದ ಮನ್ನಣೆ ಸಿಗುತ್ತಿಲ್ಲ. ಹಾಗಾಗಿ ಕೃತಕ ಬುದ್ಧಿಮತ್ತೆ ಅನ್ನು ಕೇವಲ ಸಂರಕ್ಷಣಾ ದಾಖಲಾತಿಗಾಗಿ ಬಳಸಬೇಕೇ ಹೊರತು, ಅದು ನೈಜ ಕಲಾವಿದರ ಸ್ಥಾನವನ್ನು ಆಕ್ರಮಿಸದಂತೆ ಎಚ್ಚರ ವಹಿಸುವುದು ಇಂದಿನ ಅಗತ್ಯವಾಗಿದೆ. ಇಲ್ಲವಾದರೆ ನೈಜತೆ ಮತ್ತು ಗ್ರಾಮೀಣ ಸೊಗಡು ಮತ್ತು ಭಾವನೆಗಳು ಮಾಯವಾಗುತ್ತವೆ.

ಪರಾಮರ್ಶನ ಗ್ರಂಥಗಳು

- ಜವರೇಗೌಡ, ದೇ. *ಜನಪದ ಅಧ್ಯಯನ.*
- ಲಿಂಗಯ್ಯ, ಡಿ., ಕೆ. ಆರ್. ಸಂಧ್ಯಾರೆಡ್ಡಿ. *ಜಾನಪದ ಸ್ವರೂಪ ಮತ್ತು ಸಾಹಿತ್ಯ.*
- ಮುಗಳಿ, ರಂ.ಶ್ರೀ. (2014). *ಕನ್ನಡ ಸಾಹಿತ್ಯ ಚರಿತ್ರೆ.* ಗೀತಾ ಬುಕ್ ಹೌಸ್.
- ರಾಜಪ್ಪ ದಳವಾಯಿ. (2023). *ಕನ್ನಡ ಸಾಹಿತ್ಯ ಕೋಶ.* ಎಚ್.ಬಿ.ಟಿ ಪಬ್ಲಿಕೇಷನ್.